DEEDS

# ಸಂವಾದ

ಸಮತೆಯ ಸಮಾಜದೆಡೆಗೆ

ಸಂವಾದ 5

ಖಾಸಗಿ ಪ್ರಸಾರಕ್ಕಾಗಿ ಮಾತ್ರ

## ನಿಮ್ಮೊಂದಿಗೆ ..........

ಡೀಡ್ಸ್ ಸಂಸ್ಥೆ ತಳಮಟ್ಟದಲ್ಲಿ ಕಾನೂನು ಜ್ಞಾನ ಪ್ರಸರಣದ ದಿಸೆಯಲ್ಲಿ ಕಾರ್ಯ ಚಟುವಟಿಕೆಗಿಳಿದಿದೆ. ಈ ಚಟುವಟಿಕೆಯ ಭಾಗವಾಗಿ ಕಾನೂನನ್ನು ಸರಳವಾಗಿ ಮಹಿಳೆಯರ ಬಳಿಗೆ ಒಯ್ಯಲು ಪೂರಕ ಕಾನೂನು ಸುಗಮಗಾರರ ತಂಡವನ್ನು ಗದಗ ಹಾಗೂ ಕೊಪ್ಪಳದಲ್ಲಿ ಬೆಳೆಸುತ್ತಿರುವುದು ತಮಗೆಲ್ಲಾ ತಿಳಿದಿರುವಂತದ್ದೇ ಆಗಿದೆ. ಈ ಪ್ರಕ್ರಿಯೆ ಇದೀಗ ಕೊನೆಯ ಹಂತದಲ್ಲಿದೆ. (ಅಕ್ಟೋಬರ್ ತಿಂಗಳು).

ಪೂರಕ ಕಾನೂನು ಸುಗಮಗಾರರನ್ನು ಬೆಳೆಸುವ ಪ್ರಕ್ರಿಯೆಯು ಎರಡೂ ಜಿಲ್ಲೆಗಳಲ್ಲಿ ಸ್ವಯಂಸೇವಾ ಸಂಸ್ಥೆಗಳ ಬೆಂಬಲದೊಂದಿಗೆ ಅನುಷ್ಠಾನಗೊಂಡಿದೆ. ಈ ಅವಧಿಯಲ್ಲಿ ಎರಡೂ ಜಿಲ್ಲೆಗಳ ತರಬೇತಿ ಫಲಶ್ರುತಿಗಳು ಆಶಾದಾಯಕವಾಗಿ ನಮ್ಮ ಮುಂದಿವೆ. ಸಹಭಾಗಿತ್ವ ನೆಲೆಯಲ್ಲಿ ಕೆಲಸ ಸಾಗಿದ್ದು ಸಹಭಾಗಿ ಸಂಸ್ಥೆಗಳು ತಮ್ಮ ಕಾರ್ಯಕರ್ತೆ/ಕರ್ತರನ್ನು ಯಾವುದೇ ತಕರಾರಿಲ್ಲದೆ ತರಬೇತಿಗಳಿಗೆ ಕಳುಹಿಸಿಕೊಟ್ಟಿದ್ದಾರೆ. ಮೂರನೆಯ ಹಂತದ ತರಬೇತಿಯವರೆಗೂ ಅದನ್ನು ಕಾಯ್ದುಕೊಂಡಿದ್ದಾರೆ. ತಳಹಂತದ ಮಾಹಿತಿ ಸಾಮಗ್ರಿಗಳನ್ನು ತಮ್ಮಲ್ಲಿ ಸಂಗ್ರಹಿಸಿಟ್ಟು ಭಾಗಾರ್ಥಿಗಳಿಗೆ ಸಕಾಲದಲ್ಲಿ ತಲಪಿಸಲು ನೆರವಾಗಿದ್ದಾರೆ. ತಮ್ಮ ಸ್ವ ಸಹಾಯ ಸಂಘಗಳ ಮಹಿಳೆಯರನ್ನು ಭಾಗಾರ್ಥಿಗಳಾಗಿಸಿದ್ದಾರೆ. ತಮ್ಮ ಕಾರ್ಯಕ್ರಮಗಳಲ್ಲಿ ಪ್ರಚಾರ ಸಾಮಗ್ರಿಗಳನ್ನು ವಿತರಿಸಿದ್ದಾರೆ. ಸಹಭಾಗಿ ಸಂಸ್ಥೆಗಳ ಸಭೆಗಳಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿ ಸಲಹೆ, ಸೂಚನೆ, ಅನ್ನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ. ಖುಷಿಯ ವಿಷಯವೆಂದರೆ ಈಗ ತಮ್ಮ ಹತ್ತಿರದ ಪ್ರದೇಶಗಳಿಗೆ, ತಾಲೂಕುಗಳಿಗೆ ತರಬೇತಿಯನ್ನು ವಿಸ್ತರಿಸಲು ಆಸಕ್ತರಾಗಿದ್ದಾರೆ...

ತಳಹಂತದಲ್ಲಿ, ಮಹಿಳೆಯರು ತಮ್ಮ ಬದುಕಿಗೆ ಬೇಕಾದ ಒಂದಷ್ಟು ಕಾನೂನಿನ ಜ್ಞಾನವನ್ನು ತರಬೇತಿಯಿಂದ ಗಳಿಸಿಕೊಂಡಿದ್ದಾರೆ. ಮಾಹಿತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಆಸಕ್ತಿಯಿಂದ ಆಲಿಸಿದ್ದಾರೆ. ತಾವು ಕಲಿತದ್ದನ್ನು ಬೇರೆಯವರಿಗೂ ಹೇಳಿದ್ದಾರೆ. ಪ್ರಚಾರಾಂದೋಲನದ ರೀತಿಯಲ್ಲಿ ಮಾಹಿತಿ ಸಾಮಗ್ರಿಗಳನ್ನು ವಿತರಿಸಿದ್ದಾರೆ. ಕೌಟುಂಬಿಕ ದೌರ್ಜನ್ಯ, ಬಾಲ್ಯವಿವಾಹದಂತಹ ಬದುಕಿನ ಬವಣೆಗಳನ್ನು ತಮ್ಮ ಹಕ್ಕುಗಳ ಉಲ್ಲಂಘನೆಯೆಂದು ಅರ್ಥಮಾಡಿಕೊಂಡಿದ್ದಾರೆ. ಮಾತ್ರವಲ್ಲ ತಮ್ಮ ಹಾಗೂ ಇತರ ಮಹಿಳೆಯರ ಹಕ್ಕುಗಳ ಉಲ್ಲಂಘನೆಯಾದಾಗ ಅದನ್ನು ಎದುರಿಸಲು ಸಿದ್ಧರಾಗಿದ್ದಾರೆ...

ಇನ್ನು ಪೂರಕ ಕಾನೂನು ಸುಗಮಗಾರರಲ್ಲಿ ಬಹುತೇಕರು ತಾವು ಪಡೆದ ತರಬೇತಿಯನ್ನು ಎದೆಗಿಳಿಸಿಕೊಂಡಿದ್ದಾರೆ. ತರಬೇತುದಾರರಾಗಿ ಕಾನೂನು ಸೇವಾ ಪ್ರಾಧಿಕಾರದಿಂದ, ಸ್ವಯಂಸೇವಾ ಸಂಸ್ಥೆಗಳಿಂದ ಗುರುತಿಸಿಕೊಂಡಿದ್ದಾರೆ. ಭಾಗಾರ್ಥಿ ಮಹಿಳೆಯರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಅವರ ಬೆನ್ನಹಿಂದೆ ನಿಂತು ಸಹಕಾರ ನೀಡಿ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ....

ಹೀಗೆಲ್ಲ ಪೂರಕ ಕಾನೂನು ತರಬೇತಿಯ ಪರಿಣಾಮಗಳು ಕೈ ಸೇರುತ್ತಿರುವ ಹೊತ್ತಿನಲ್ಲಿ ನಾವು ಯೋಜನೆಯ ಕೊನೆಯ ಘಟ್ಟವನ್ನು ತಲಪಿದ್ದೇವೆ. ನಾವೀಗ ಮುಂದಿನ ಹಾದಿಯ ಬಗ್ಗೆ ಮಾತಾಡಬೇಕಿದೆ. ಜನರಿಗೆ ಕಾನೂನಿನ ಜ್ಞಾನದಾಹ ಇರುವುದನ್ನು ನಮ್ಮ ಕಾರ್ಯಕ್ಷೇತ್ರದ ಅನುಭವಗಳು ತೆರೆದು ತೋರಿಸಿವೆ. ಈ ಹಿನ್ನೆಲೆಯಲ್ಲಿ ಪ್ರತಿ ತಾಲೂಕಿನಲ್ಲಿ ಕನಿಷ್ಠ 20 ಮಂದಿ ಪೂರಕ ಕಾನೂನು ಸುಗಮಗಾರರು ಲಭ್ಯವಿದ್ದು ಅವರು ಜನರನ್ನು ಕಾನೂನು ಸಾಕ್ಷರರನ್ನಾಗಿಸಬೇಕು; ಜನರು ಕಾನೂನಿನ ತಿಳಿವಳಿಕೆ ಹೊಂದಿ ತಮ್ಮ ಹಕ್ಕುಗಳ ಬಗ್ಗೆ ಜಾಗೃತರಾಗುವಂತೆ ಮಾಡಬೇಕು ಎಂಬುದು ನಮ್ಮ ಆಶಯ. ತಮ್ಮೆಲ್ಲರ ಸಹಕಾರವನ್ನು ನೆನೆಯುತ್ತಾ ಈ ನಿಟ್ಟಿನಲ್ಲಿ ಸಹಭಾಗಿ ಸಂಸ್ಥೆಗಳು ಹಾಗೂ ಸುಗಮಗಾರರು ಚಿಂತನ ಮಂಥನ ನಡೆಸಿ ಮುನ್ನಡೆಯಬೇಕೆಂದು ಆಶಿಸುತ್ತೇವೆ.

### ಮಂಗಳೂರು ಸಮಾಚಾರ

## ಸುಪ್ರೀಂ ಕೋರ್ಟಿನ ಮಹಿಳಾಪರ ತೀರ್ಪುಗಳು – ವಿಚಾರ ಸಂಕಿರಣ




2018ನೇ ಇಸವಿಯ ಕೊನೆಯ ದಿನಗಳಲ್ಲಿ ಹೊರಬಂದ ಸುಪ್ರೀಂ ಕೋರ್ಟಿನ ಕೆಲ ತೀರ್ಪುಗಳು ಮಹಿಳೆಯರ ಹಕ್ಕುಗಳಿಗೆ ಸಂಬಂಧಿಸಿದ್ದಾಗಿದ್ದು ಅತ್ಯಂತ ಮಹತ್ವದ್ದಾಗಿವೆ. ಈ ತೀರ್ಪುಗಳನ್ನು ಜನರ ಬಳಿಗೆ ವ್ಯಾಪಕವಾಗಿ ಒಯ್ಯಬೇಕು ಎಂಬ ಹಿನ್ನೆಲೆಯಲ್ಲಿ 30.01.2019ರಂದು ಮಂಗಳೂರಿನಲ್ಲಿ ವಿಚಾರಸಂಕಿರಣವನ್ನು ಡೀಡ್ಸ್ ಆಯೋಜಿಸಿತ್ತು. ತ್ರಿವಳಿ ತಲಾಖ್ ಬಗ್ಗೆ ಪ್ರಜಾವಾಣಿ ಪತ್ರಿಕೆಯ ಸಹ ಸಂಪಾದಕರಾದ ಬಿ.ಎಂ ಹನೀಫ್, ಶಬರಿಮಲೆಗೆ ಮಹಿಳೆಯರ ಪ್ರವೇಶದ ಕುರಿತು ವಕೀಲರಾದ ಪುನೀತ್, ಕೌಟುಂಬಿಕ ದೌರ್ಜನ್ಯ ಕಾನೂನಿನ ಕುರಿತು ಡಾ.ಎಂ.ಜಿ ಶೋಭಾದೇವಿ, ವ್ಯಭಿಚಾರ–ಸೆ.497 ಬಗ್ಗೆ ಮರ್ಲಿನ್ ಮಾರ್ಟಿಸ್ ಮಾತಾಡಿದರು. ಶೆಹನಾಜ್, ಚಂದ್ರಕಲಾ ನಂದಾವರ, ರಾಜಿ.ಸಿ.ನಾಯರ್, ಅನುಕ್ರಮವಾಗಿ ಪ್ರತಿಕ್ರಿಯೆ ನೀಡಿದರು. ಡೀಡ್ಸ್‌ನ ಮರ್ಲಿನ್ ಮಾರ್ಟಿಸ್ ಪ್ರಸ್ತಾವನೆಗೈದರು. ಸಂಚಲನದ ಆಶಾಲತಾ ಸುವರ್ಣ ವಂದಿಸಿದರು.

# ರಾಜಕೀಯದಲ್ಲಿ ಮಹಿಳೆಯರು ಎಲ್ಲಿದ್ದಾರೆ?

• ಗುಲಾಬಿ ಬಿಳಿಮಲೆ

ಹದಿನೇಳನೆಯ ಲೋಕಸಭಾ ಚುನಾವಣೆಗೆ ದೇಶದ ರಾಜಕೀಯ ರಣಭೂಮಿಯಲ್ಲಿ ಶಕ್ತಿ ಯುಕ್ತಿಗಳು ಇನ್ನಿಲ್ಲದಂತೆ ಮೆರೆದಾಡುತ್ತಿವೆ. ಪ್ರತಿ ಚುನಾವಣೆಯ ಸಂದರ್ಭದಲ್ಲಿ ಬಹಿರಂಗವಾಗುವ ಅಂಕಿ ಅಂಶಗಳು ಮಹಿಳೆಯರಿಗೆ 33% ರಾಜಕೀಯ ಮೀಸಲಾತಿಯ ಅಗತ್ಯವನ್ನು ಸಮರ್ಥಿಸುತ್ತಾ ಹೋಗುತ್ತವೆ. ಈ ಬಾರಿಯ ಚುನಾವಣೆಯಲ್ಲಾಗಿರುವ ಆಸಕ್ತಿದಾಯಕ ಬದಲಾವಣೆ ಅಂದರೆ ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತಮ್ಮ ತೃಣಮೂಲ ಪಕ್ಷದಲ್ಲಿ ಮಹಿಳೆಯರಿಗೆ 41% ಮೀಸಲಾತಿ ನೀಡಿದ್ದಾರೆ. ಒಡಿಶಾದಲ್ಲಿ ಬಿಜೆಡಿ ಮುಖ್ಯಸ್ಥ ನವೀನ್ ಪಾಟ್ನಾಯಕ್ 33% ಮೀಸಲಾತಿ ನೀಡಿದ್ದಾರೆ. ಕಾಂಗ್ರೆಸ್‌ನ ಚುನಾವಣಾ ಪ್ರಣಾಳಿಕೆಯಲ್ಲಿ ರಾಹುಲ್ ಗಾಂಧಿ ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ 33% ಮೀಸಲಾತಿ ಮಸೂದೆಯನ್ನು ಜಾರಿಗೆ ತರುವುದಾಗಿಯೂ, ಸರಕಾರೀ ಉದ್ಯೋಗಗಳಲ್ಲಿ 33% ಮೀಸಲಾತಿಯನ್ನು ಮಹಿಳೆಯರಿಗೆ ನೀಡುವುದಾಗಿಯೂ ಘೋಷಿಸಿದ್ದಾರೆ. ಅಂತೂ ಮಹಿಳೆಯರಿಗೆ ಕನಸುಗಳನ್ನು ಮಾರುವ ಪ್ರಯತ್ನ ಚುನಾವಣಾ ಸಂದರ್ಭಗಳಲ್ಲಿ ಭರ್ಜರಿಯಾಗಿ ನಡೆಯುತ್ತಿದೆ.

### ಅಧಿಕಾರದ ಮೊಗಸಾಲೆಯಲ್ಲಿ ಮಹಿಳೆಯರೆಷ್ಟು?

ಮತಗಟ್ಟೆಗಳಲ್ಲಿ ಉದ್ದುದ್ದ ಸಾಲುಗಳಲ್ಲಿ ನಿಂತು ನೇತಾರರನ್ನು ಆಯ್ಕೆ ಮಾಡುವ ಮತದಾನದಲ್ಲಿ ಮಹಿಳೆಯರು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಂತೂ ಅನೇಕ ರಾಜ್ಯಗಳಲ್ಲಿ ಮತದಾನ ಪ್ರಮಾಣ ಪುರುಷರಿಗಿಂತ ಮಹಿಳೆಯರದು ಹೆಚ್ಚಿರುವುದನ್ನೂ, ಮಹಿಳಾ ಅಭ್ಯರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದನ್ನೂ ಅಂಕಿ ಅಂಶಗಳು ಹೇಳುತ್ತಿವೆ. ಕರ್ನಾಟಕದ 2018 ರ ವಿಧಾನಸಭಾ ಚುನಾವಣೆಯಲ್ಲಿ 2.44 ಕೋಟಿ ಮಹಿಳೆಯರು ಮತದಾನ ಮಾಡಿದ್ದಾರೆ. ಅದು ಒಟ್ಟು ಮತದಾರರ 49% ಆಗುತ್ತದೆ. ಅಂದರೆ ಹೆಚ್ಚೂ ಕಡಿಮೆ ಅರ್ಧದಷ್ಟು ಮತಗಳು ಮಹಿಳೆಯರದ್ದೇ ಆಗಿವೆ. 2014 ರ ಲೋಕಸಭಾ ಚುನಾವಣೆಯಲ್ಲಿ ಮತಚಲಾಯಿಸಿದ ಮಹಿಳೆಯರ ಸಂಖ್ಯೆ ಶೇ. 65.63 ಆಗಿತ್ತು. ಇದೇ ಸಂದರ್ಭದಲ್ಲಿ ಪುರುಷರ ಮತ ಪ್ರಮಾಣ ಶೇ. 67.07 ಆಗಿತ್ತು. ದೇಶದ 16 ರಾಜ್ಯಗಳಲ್ಲಿ ಮಹಿಳಾ ಮತದಾರರ ಸಂಖ್ಯೆ ಶೇಕಡಾವಾರು ಪುರುಷ ಮತದಾರರಿಗಿಂತ ಹೆಚ್ಚು. ಆದರೆ ಎಲ್ಲರ ಬದುಕಿನ ಮೇಲೆ ಪರಿಣಾಮ ಬೀರುವಂತಹ ನೀತಿಗಳನ್ನು ರೂಪಿಸುವ, ನಿರ್ಧಾರಗಳನ್ನು ಕೈಗೊಳ್ಳುವ ನಮ್ಮ ಶಾಸನಸಭೆಗಳಲ್ಲಿ ಮಾತ್ರ ಬೆರಳೆಣಿಕೆಯ ಶಾಸಕಿಯರಿದ್ದಾರೆ. 1957 ರಲ್ಲಿ 22 (4.45%) ಸಂಸದೆಯರಿದ್ದು ಅದು 2014 ರಲ್ಲಿ 66 (12.15%) ಕ್ಕೆ ಬಂದು ನಿಂತಿದೆ. ಪ್ರಜಾಪ್ರಭುತ್ವ ರಾಷ್ಟ್ರವೊಂದರಲ್ಲಿ ರಾಜಕೀಯ ಹಕ್ಕು ಅಧಿಕಾರ ಮತ್ತು ನಿಯಂತ್ರಣ ಪುರುಷನಷ್ಟೇ ಮಹಿಳೆಯರದ್ದೂ ಆಗಿರುತ್ತದೆ. ಹೀಗಿರುವಾಗ, ಮುಕ್ತ ಹಾಗೂ ನ್ಯಾಯಯುತ ಚುನಾವಣೆಯಲ್ಲಿ ಮಹಿಳೆಯರಿಗೆ ಇಷ್ಟು ಪಾಲು ದಕ್ಕಿದರೆ ಸಾಕೇ? ಇಷ್ಟಕ್ಕೂ ಅಧಿಕಾರದ ಸಿಂಹ ಪಾಲನ್ನು ತಮ್ಮದಾಗಿಸಿಕೊಂಡ ಪುರುಷಲೋಕದ ರಾಜಕಾರಣವಾದರೂ ಹೇಗಿದೆ?

### ಪುರುಷ ರಾಜಕಾರಣದ ಕತ್ತಲ ಭಾಗ

ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ ಮೊದಲಹಂತದಲ್ಲಿ ಸ್ಪರ್ಧಿಸಿರುವ 1279 ಅಭ್ಯರ್ಥಿಗಳಲ್ಲಿ 1266 ಅಭ್ಯರ್ಥಿಗಳ ಪ್ರಮಾಣ ಪತ್ರದ ವಿಶ್ಲೇಷಣೆಯ ಆಧಾರದಲ್ಲಿ ಅಸೋಸಿಯೇಶನ್ ಫಾರ್ ಡೆಮಾಕ್ರಾಟಿಕ್ ರಿಫಾರ್ಮ್ಸ್ (ಎಡಿಆರ್) ಸಂಸ್ಥೆ ವಿಶ್ಲೇಷಣೆಯೊಂದನ್ನು ಪ್ರಕಟಿಸಿದೆ. ಅದು ಹೀಗಿದೆ–

1,266 ಉಮೇದುದಾರರ ಪೈಕಿ 213 (17%) ಮಂದಿ ತಮ್ಮ ಮೇಲೆ ಕ್ರಿಮಿನಲ್ ಪ್ರಕರಣಗಳು ಇರುವುದಾಗಿಯೂ, 146 ಮಂದಿ (12%) ಗಂಭೀರ ಕ್ರಿಮಿನಲ್ ಪ್ರಕರಣಗಳು ಇರುವುದಾಗಿಯೂ, 12 ಮಂದಿ ತಾವು ಅಪರಾಧಿಗಳೆಂದು ಸಾಬೀತಾದ ಪ್ರಕರಣಗಳನ್ನು ಹೊಂದಿರುವುದಾಗಿಯೂ, 25 ಅಭ್ಯರ್ಥಿಗಳು ತಮ್ಮ ಮೇಲೆ ಕೊಲೆಯತ್ನ ಸಂಬಂಧಿತ ಪ್ರಕರಣಗಳಿವೆಯೆಂದೂ, 4 ಮಂದಿ ಅಪಹರಣ ಸಂಬಂಧಿತ ಪ್ರಕರಣಗಳು ಇದೆಯೆಂದೂ, 16 ಮಂದಿ ತಮ್ಮ ಮೇಲೆ ಮಹಿಳೆಯರ ವಿರುದ್ಧದ ಅಪರಾಧ (ಅತ್ಯಾಚಾರ, ಹಲ್ಲೆ, ಮಾನಭಂಗ ಇತ್ಯಾದಿ) ಪ್ರಕರಣಗಳಿವೆಯೆಂದೂ, 12 ಮಂದಿ ದ್ವೇಷ ಭಾಷಣದ ಕೇಸುಗಳಿವೆಯೆಂದೂ ಘೋಷಿಸಿದ್ದಾರೆ.

### ಇಂತಹವರಿಂದ ಮಹಿಳೆಯರ ಹಿತರಕ್ಷಣೆ ಸಾಧ್ಯವೇ?

ಮೇಲೆ ಹೇಳಿದಂತಹ ಜನನಾಯಕರಲ್ಲಿ ಮಹಿಳಾ ಸಂವೇದನೆಯನ್ನು, ಮಹಿಳಾಪರ ಕಾಳಜಿಯನ್ನು ನಿರೀಕ್ಷಿಸುವುದಾದರೂ ಹೇಗೆ? ಹಾಗಾಗಿ ಮಹಿಳೆಯರನ್ನು ಮೃದುವಾಗಿ ಕಾಣುವ, ಮಹಿಳೆಯರ ಸ್ವಾವಲಂಬಿತನಕ್ಕೆ ಒತ್ತು ನೀಡುವ, ಮಹಿಳೆಯರ ಮೇಲೆ ನಡೆಯುವ ಶೋಷಣೆಯ ವಿರುದ್ಧ ಮಾತಾಡುವವರನ್ನು, ಪಕ್ಷಗಳನ್ನು ಮಾತ್ರ ಬೆಂಬಲಿಸುತ್ತೇವೆ ಎಂದು ಮಹಿಳೆಯರೇ ಒಟ್ಟಾಗಿ ತೀರ್ಮಾನಿಸಬೇಕಾದ ಕಾಲವಿದು.

### ರಾಜಕಾರಣದಲ್ಲಿ ಮಹಿಳೆಯರೇಕೆ ಕಡಿಮೆ?

ರಾಜಕಾರಣದಲ್ಲಿ ಮಹಿಳೆಯರ ಸಂಖ್ಯೆ ಸ್ಥಾನ, ವರ್ಚಸ್ಸು ಪ್ರಭಾವ ಇತ್ಯಾದಿಗಳು ಕಡಿಮೆಯಿರುವುದಕ್ಕೆ ನಮ್ಮ ಸಮಾಜದ ಗಂಡಾಳ್ವಿಕೆ ವ್ಯವಸ್ಥೆ ಕಾರಣವೆನ್ನುವುದರಲ್ಲಿ ಎರಡು ಮಾತಿಲ್ಲ. ಜತೆಗೆ ಲೈಂಗಿಕ ಹಿಂಸೆ, ಕಿರುಕುಳ ಸಾಮಾಜಿಕ ಅಪನಿಂದೆ, ಆರ್ಥಿಕ ಬಲದ ಕೊರತೆ, ಮಹಿಳೆಯರು ಗೆಲ್ಲಲಾರರು ಎಂಬ ಪೂರ್ವಗ್ರಹ, ಧಿಡೀರನೆ ಮನೆಯೊಳಗಿಂದ ಹೊರಬಂದು ರಾಜಕೀಯ ಒಳಸುಳಿಗಳನ್ನು ಅರ್ಥಮಾಡಿಕೊಳ್ಳಲಾಗದ ತಿಳುವಳಿಕೆಯ ಕೊರತೆ, ಕುಟುಂಬದಲ್ಲಿ ಎದುರಾಗುವ ಸಮಸ್ಯೆಗಳು....ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇವೆಲ್ಲವನ್ನು ದಾಟಿ ಮುಂದೆ ಸಾಗುವುದು ಮಹಿಳೆಯರಿಗೆ ಬಲು ದೊಡ್ಡ ಸವಾಲೇ ಸರಿ. ಎಂದೇ ಮಹಿಳಾ ಮೀಸಲಾತಿ ನೀಡಬೇಕೆಂಬ ಕೂಗು ಮುನ್ನೆಲೆಗೆ ಬಂದಿರುವುದು. ಈ ಕೂಗು ಸ್ವಾತಂತ್ರ್ಯಪೂರ್ವದಿಂದಲೂ ಇದ್ದು ಈವರೆಗೂ ಅದು ನೆನೆಗುದಿಗೆ ಬಿದ್ದಿದೆ. ಮೀಸಲಾತಿ ಜಾರಿಗೆ ಬಂದದ್ದೇ ಆದರೆ ದೊಡ್ಡ ಸಂಖ್ಯೆಯಲ್ಲಿ ಪುರುಷರ ಸ್ಥಾನಗಳು ಅವರ ಕೈ ತಪ್ಪಿ ಹೋಗುತ್ತವೆ ಎಂಬ ಭಯವೇ ಮಹಿಳಾ ಮೀಸಲು ಮಸೂದೆಯ ವಿರೋಧಕ್ಕಿರುವ ನಿಜವಾದ ಕಾರಣ.



ಒಟ್ಟಿನಲ್ಲಿ, ಪುರುಷಮಯವಾಗಿರುವ ರಾಜಕೀಯಕ್ಕೆ ವಿಭಿನ್ನ ಅನುಭವಗಳನ್ನು, ಮೌಲ್ಯಗಳನ್ನು ಮಹಿಳೆಯರು ತರಬೇಕಾದ ಅವಶ್ಯಕತೆಯಿದೆ. ರಾಜಕೀಯ ಪ್ರಾತಿನಿಧ್ಯದ ಪ್ರಮಾಣವನ್ನು ಹೆಚ್ಚಿಸಿದಲ್ಲಿ ಮಾತ್ರ ಅಲ್ಲಿ ನಡೆಯುವ ಚರ್ಚೆಗಳ ಸ್ವರೂಪ ಬದಲಾಗಬಹುದು. ಪ್ರಜಾಸತ್ತೆಯ ಗುಡಿಯೊಳಗಿನ ಕೊಳೆ ತೊಳೆದು ಅರ್ಥಪೂರ್ಣ ಪ್ರಜಾಪ್ರಭುತ್ವ ರೂಪುಗೊಳ್ಳಬಹುದು. ಇದು ಸಾಧ್ಯವಾಗಬೇಕಾದರೆ ಹಲವು ಜಾತಿ, ಧರ್ಮ, ಪಕ್ಷ, ಪಂಗಡ, ಭಾಷೆಗಳ ಅಡಿಯಲ್ಲಿ ಹರಿದು ಹಂಚಿಹೋಗಿರುವ ಮಹಿಳೆಯರೆಲ್ಲರೂ ಒಂದು ಸಮುದಾಯವಾಗಿ ಗಟ್ಟಿಗೊಂಡು ತಮ್ಮ ಹಕ್ಕೊತ್ತಾಯಗಳನ್ನು ಮುಂದಿಡಬೇಕಿದೆ. ಎಚ್ಚೆತ್ತ ಸಮಸ್ತ ಮಹಿಳೆಯರು ಮತ್ತು ಮಹಿಳಾ ಕಾಳಜಿಯ ಎಲ್ಲರೂ ಜತೆಯಾಗಿ ಸಮಗ್ರ ರಾಜಕೀಯ ಆಂದೋಲನವನ್ನು ರೂಪಿಸಿ ಮುನ್ನಡೆಯಬೇಕಿದೆ. ಚಳುವಳಿಗಳಿಗೆ ಆ ಶಕ್ತಿ ಇದೆ ಎಂಬುದನ್ನು ಇತಿಹಾಸ ನಮಗೆ ಕಲಿಸಿ ಕೊಟ್ಟಿದೆ.

# ಗದಗ ಜಿಲ್ಲೆ

## ಸಹಭಾಗಿ ಸ್ವಯಂ ಸೇವಾ ಸಂಸ್ಥೆಗಳ ಸಭೆ



ಗದಗ ಜಿಲ್ಲಾ ಪೂರಕ ಕಾನೂನು ತರಬೇತಿ ಯೋಜನೆಯ ಸಹಭಾಗಿ ಸ್ವಯಂ ಸೇವಾ ಸಂಸ್ಥೆಗಳ ಸಭೆಯು 18.01.2019ರಂದು ಗದಗಿನ ಮರಾಠಾ ವಿದ್ಯಾವರ್ಧಕ ಸಂಘದ ಸಭಾಂಗಣದಲ್ಲಿ ನಡೆಯಿತು. ಸೃಷ್ಟಿ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮಹಿಳಾ ಸಮಖ್ಯ ಕರ್ನಾಟಕ, ಗದಗ ಶ್ರೀ ಸಾಯಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಹೊಸಳ್ಳಿ, ಮಹೇಶ್ವರಿ ಮಹಿಳಾ ಮಂಡಳಿ, ಕರುಣಾ ಸಂಸ್ಥೆ ಹರ್ತಿ, ಸೇವ್ ಮದರ್ ಫೌಂಡೇಶನ್ ಗದಗ ಜಿಲ್ಲಾ ಮಹಿಳಾ ತರಬೇತುದಾರರ ಸಂಚಲನ ಸಂಸ್ಥೆಗಳು ಭಾಗವಹಿಸಿದ್ದವು. ಸಂಚಲನದ ಅಧ್ಯಕ್ಷೆ ಪ್ರಭಾವತಿ ಬೆಟಗೇರಿ ಸ್ವಾಗತಿಸಿ ಹಿಂದಿನ ಸಭೆಯ ವರದಿಯನ್ನು ಓದಿದರು. ಪೂರಕ ಕಾನೂನು ಯೋಜನೆಯ ಚಟುವಟಿಕೆಗಳ ವರದಿಯನ್ನು ಫಕ್ಕೀರಮ್ಮನವರು ಪಿಪಿಟಿ ಮೂಲಕ ಪ್ರಸ್ತುತ ಪಡಿಸಿದರು.

ಗದಗ ಜಿಲ್ಲೆಯ 6 ತಾಲೂಕುಗಳಲ್ಲಿ ಪೂರಕ ಕಾನೂನು ಕಾರ್ಯಕ್ರಮವನ್ನು ಮುಂದುವರಿಸಲು ಸೃಷ್ಟಿ ಸಂಸ್ಥೆಯ ಮಾರ್ಗದರ್ಶನದಲ್ಲಿ ಕ್ರಿಯಾ ಯೋಜನೆ ಸಿದ್ಧಪಡಿಸುವುದು, ಗದಗ ಜಿಲ್ಲೆಯಲ್ಲಿ ಮಹಿಳಾ ಪ್ರಕರಣಗಳನ್ನು ನಿರ್ವಹಿಸಲು ಸೂಕ್ತ ವ್ಯವಸ್ಥೆಯೊಂದನ್ನು ರೂಪಿಸಲು ಮಹಿಳೆಯರೊಂದಿಗೆ ಕೆಲಸ ಮಾಡುವ 15–20 ಮಂದಿಗೆ ಕಾರ್ಯತಂತ್ರ ಕಾರ್ಯಾಗಾರವನ್ನು ಮಾರ್ಚ್ 15ರ ನಂತರ ಅಥವಾ ಎಪ್ರಿಲ್ ತಿಂಗಳಲ್ಲಿ ನಡೆಸುವುದು ಎಂದು ನಿರ್ಧರಿಸಲಾಯಿತು.

ಡೀಡ್ಸ್ ಸಂಸ್ಥೆಯ ಮರ್ಲಿನ್ ಮಾರ್ಟಿಸ್, ಮೋಹನ್‌ಚಂದ್ರ, ತುಕಾರಾಮ ಎಕ್ಕಾರು ತಮ್ಮ ಆಲೋಚನೆಗಳನ್ನು ಹಂಚಿಕೊಂಡರು. ಸಂಚಲನದ ಉಮಾರವರು ವಂದಿಸಿದರು.

## ಮೇಡಂ ಅವರನ್ನ ಕರೀತೀನಿ ನೋಡಿ...



**ಯಂಕಮ್ಮ ಉಪ್ಪಾರ, ಸುಗಮಗಾರರು, ಗದಗ**

ಕೋಟುಮಚಡಿಯಲ್ಲಿ ತರಬೇತಿ ಮಾಡುತ್ತಿದ್ದೆವು. ಅಲ್ಲಿಗೆ ಮುಸ್ಲಿಮ್ ಮಹಿಳೆಯರು ಹೆಚ್ಚು ಮಂದಿ ಬಂದಿದ್ದರು. ಆ ದಿನ ಅವರ ಮನೆಯಲ್ಲಿ ಒಂದು ಮುಖ್ಯ ಕಾರ್ಯಕ್ರಮವಿದ್ದರೂ ಅದನ್ನು ಬಿಟ್ಟು ಬಂದಿದ್ದರು. ಮನೆಯ ಗಂಡಸರು 'ಈ ಮೇಡಂ ಬಂದ ತಕ್ಷಣ ನಮ್ಮ ಮನೆಯ ಹೆಣ್ಣುಮಕ್ಕಳೆಲ್ಲರೂ ಆ ಸಭೆಗೆ ಓಡುತ್ತಾರಲ್ಲ, ಅಂಥದ್ದೇನು ಅವರು ಹೇಳುತ್ತಾರೆ' ಎಂಬ ಕುತೂಹಲದಿಂದ ಮಾಹಿತಿ ಕೇಳಲು ಬಂದಿದ್ದರು. ಮಾಹಿತಿಯನ್ನು ಆಲಿಸಿ, ನನ್ನ ಹೆಂಡತಿಯ ಆಧಾರ್ ಕಾರ್ಡ್ ಇಲ್ಲ, ಅದು ಇಲ್ಲ ಇದು ಇಲ್ಲ ಎಂದೆಲ್ಲ ಹೇಳುತ್ತ ಮುಂದೇನು ಮಾಡಬೇಕು ಎಂಬುದನ್ನು ತಿಳಿದುಕೊಂಡರು. ತುಂಬಾ ಸಲ ಮಹಿಳೆಯರು ವೈಯಕ್ತಿಕವಾಗಿ ತಮ್ಮ ಮನೆಗಳಿಗೆ ಕರೆದುಕೊಂಡು ಹೋಗಿ ತಮ್ಮ ಕಷ್ಟಗಳನ್ನು ಹೇಳಿಕೊಳ್ಳುತ್ತಾರೆ. ತಮ್ಮ ಗಂಡಂದಿರಿಗೆ ನನ್ನ ಕಡೆಯಿಂದ ಮಾಹಿತಿಯನ್ನು ಕೇಳಿಸಿದ್ದಾರೆ. ಗಂಡ ಏನಾದರೂ ದೌರ್ಜನ್ಯ ಮಾಡಲು ಬಂದರೆ 'ನಾನು ಆ ಮೇಡಂ ಅವರಿಗೆ ಫೋನ್ ಮಾಡ್ತೇನೆ, ಅವರನ್ನು ಕರೆಸುತ್ತೇನೆ' ಎಂದು ಹೆದರಿಸುತ್ತಾರೆ.

## ತಳಹಂತದ ಮಾಹಿತಿ ಕಾರ್ಯಕ್ರಮ



ಎರಡನೇ ಹಂತದ ಕಾನೂನು ತರಬೇತಿಯು ಮುಗಿದಿದ್ದು ಒಟ್ಟು 225 ತರಬೇತಿಗಳು ನಡೆದಿವೆ (ಗದಗದಲ್ಲಿ 123, ಕೊಪ್ಪಳದಲ್ಲಿ 102). ಒಟ್ಟು 5,064 ಮಂದಿ (ಗದಗದಲ್ಲಿ 2,954, ಕೊಪ್ಪಳದಲ್ಲಿ 2,110) ಮಾಹಿತಿಗಳನ್ನು ಪಡೆದುಕೊಂಡಿದ್ದಾರೆ. ಒಟ್ಟು 46,044 ಪ್ರಚಾರ ಸಾಮಗ್ರಿಗಳನ್ನು ಭಾಗಾರ್ಥಿಗಳು ಹಂಚಿದ್ದಾರೆ. ಮೂರನೆಯ ಹಂತದ ದಾಖಲೆಗಳ ಮಹತ್ವ ತರಬೇತಿ ನಡೆಯುತ್ತಿದ್ದು ಈ ವರೆಗೆ ಒಟ್ಟು 191 (ಗದಗ 132, ಕೊಪ್ಪಳ 59) ತರಬೇತಿಗಳು ನಡೆದಿವೆ. 4,335 (ಗದಗ 3,124, ಕೊಪ್ಪಳ 1,211) ಮಂದಿ ಮಾಹಿತಿಗಳನ್ನು ಪಡೆದುಕೊಂಡಿದ್ದಾರೆ. ಒಟ್ಟು 21,520 (ಗದಗ 15,620, ಕೊಪ್ಪಳ 5,900) ಪ್ರಚಾರ ಸಾಮಗ್ರಿಗಳ ಹಂಚಿಕೆಯಾಗಿದೆ.



ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಮಾವೇಶದಲ್ಲಿ ಸುಗಮಗಾರರು ಸುಮಾರು 6000 ಮಂದಿಗೆ ಕಾನೂನು ಮಾಹಿತಿ ಹಂಚಿದರು.



ವರದಿ: ಫಕ್ಕೀರಮ್ಮ ಎಸ್ ಲಕ್ಕುಂಡಿ

# ಕೊಪ್ಪಳ ಜಿಲ್ಲೆ

## ಪೂರಕ ಕಾನೂನು ಸುಗಮಗಾರರ ಸಭೆ



ಗದಗ ಹಾಗೂ ಕೊಪ್ಪಳ ಜಿಲ್ಲೆಗಳ ಪೂರಕ ಕಾನೂನು ಸುಗಮಗಾರರ ಮಾಹಿತಿ ಕಾರ್ಯಕ್ರಮಗಳ ಅನುಭವ ಹಂಚಿಕೆ ಸಭೆಯು ದಿನಾಂಕ 19.01.2019 ರಂದು ಕೊಪ್ಪಳ ಬಿ ಎಸ್ ಪವಾರ್ ಸಭಾಂಗಣದಲ್ಲಿ ನಡೆಯಿತು. ಮೋಹನ್‌ಚಂದ್ರರವರು ಕಾರ್ಯಕ್ರಮದ ಪರಿಣಾಮಗಳು, ಅಡೆತಡೆಗಳು, ಸವಾಲುಗಳು ಇತ್ಯಾದಿಗಳನ್ನು ಗುರುತಿಸುವ ಅವಶ್ಯಕತೆಯ ಹಿನ್ನೆಲೆಯಲ್ಲಿ ಪ್ರಶ್ನೋತ್ತರ ಮಾದರಿಯಲ್ಲಿ ಕಲಾಪವನ್ನು ನಿರ್ವಹಿಸಿದರು. ಮರ್ಲಿನ್ ಮಾರ್ಟಿಸ್‌ಎಲ್ಲ ಅಂಶಗಳನ್ನು ಕ್ರೋಡೀಕರಿಸಿ ಎಲ್ಲರಿಗೂ ವಂದಿಸಿದರು. ಸುಗಮಗಾರರು ತಮ್ಮ ತರಬೇತಿಯ ಅನುಭವಗಳನ್ನು ಹಂಚಿಕೊಂಡರು.



ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಜಾತ್ರೆಯಲ್ಲಿ ಸರ್ವೋದಯ ಸಂಸ್ಥೆಯ ಸಹಯೋಗದಲ್ಲಿ ಸುಗಮಗಾರರು ಸುಮಾರು 2500 ಮಂದಿಗೆ ಕಾನೂನು ಮಾಹಿತಿ ನೀಡಿದರು.

## ತರಬೇತಿಯಿಂದಲೇ ಎಂಟು ಸಾವಿರ ಸಂಪಾದಿಸಿದೆ!



**ರತ್ನಾ ಎತ್ತಿನಮನಿ**

ಮೊದಲು ನಾನು ನನ್ನ ಹಳ್ಳಿಯಿಂದ ತರಬೇತಿಗೆ ಬರಬೇಕಾದರೆ ನಾಲ್ಕು ಜನರ ಮುಂದೆ ಮಾತಾಡಲು ಭಯವಾಗುತ್ತಿತ್ತು. ಈ ತರಬೇತಿ ಪಡೆದ ಮೇಲೆ ಎಲ್ಲರ ಮುಂದೆ ಮಾತಾಡುವ ಧೈರ್ಯ, ಕೌಶಲ ಬಂದಿದೆ. ಧರ್ಮಸ್ಥಳ ಸಂಸ್ಥೆಯಲ್ಲಿ ತರಬೇತಿ ನೀಡಲು ಒಂದು ಅವಕಾಶ ಸಿಕ್ಕಿತು. ನನ್ನ ತರಬೇತಿಯನ್ನು ನೋಡಿ ಆ ಸಂಸ್ಥೆಯವರು ಬಳಿಕ ಹಲವಾರು ತರಬೇತಿಗಳಿಗೆ ಕರೆದರು. ನಾನು ತರಬೇತಿ ಕೊಟ್ಟೇ 8000 ರುಪಾಯಿ ಸಂಪಾದಿಸಿದೆ!

## ಮದ್ಯಪಾನ ನಿಷೇಧ–ಪೊಲೀಸ್ ಇಲಾಖೆಗೆ ಮನವಿ



ಮಾದಿನೂರು ಗ್ರಾಮದ ಭಾಗಾರ್ಥಿ ಮಹಿಳೆಯರು ಮತ್ತು ಸಂಜೀವಿನಿ ಒಕ್ಕೂಟದ ಮಹಿಳೆಯರು ಮದ್ಯಪಾನ ನಿಷೇಧದ ಕುರಿತು ಗ್ರಾಮಪಂಚಾಯಿತಿಗೆ, ಪೊಲೀಸ್ ಇಲಾಖೆಗೆ ಮನವಿಯನ್ನು ನೀಡಿದ್ದಾರೆ. ಮಾಹಿತಿ ಕಾರ್ಯಕ್ರಮದ ಫಲಶ್ರುತಿಯಾದ ಈ ಬೆಳವಣಿಗೆ ಶ್ಲಾಘನೀಯ.



## ನರಸಿಂಹರಾಜು ಕಮ್ಮಾರ

ನಾನು ಮೊದಲ ಹಂತದ ತರಬೇತಿ ನೀಡಿದಾಗ ಕೌಟುಂಬಿಕ ದೌರ್ಜನ್ಯ ಅನುಭವಿಸುತ್ತಿರುವ ಮಹಿಳೆಯೊಬ್ಬರು ಗುಂಪಿನಲ್ಲಿದ್ದರು. ನಾನು ಎರಡನೆ ಹಂತದ ತರಬೇತಿಗೆ ಹೋದಾಗ ಆ ಮಹಿಳೆ ತಾನು ಪಡೆದ ಮಾಹಿತಿಯಿಂದ ಧೈರ್ಯದಿಂದ ಸಮಸ್ಯೆಯನ್ನು ಎದುರಿಸಿ ಗಂಡನ ಮನೆಯಲ್ಲಿ ಆರಾಮವಾಗಿ ಇರುವುದಾಗಿ ಹೇಳಿಕೊಂಡರು. ಮೂರನೆಯ ಹಂತದ ತರಬೇತಿಯಲ್ಲಿ ತನ್ನ ತಂಗಿಯ ಗಂಡನ ಮನೆಯ ಪಡಿತರ ಚೀಟಿಯಲ್ಲಿ ಆಕೆಯ ಹೆಸರಿಲ್ಲದಿರುವುದರಿಂದ ಅವಳ ಹೆಸರನ್ನು ಸೇರಿಸುತ್ತಾ ಇದ್ದೇವೆ ಎಂದು ಹೇಳಿದರು. ನಾವು ಕೊಡುವಂತಹ ಕರಪತ್ರಗಳು ಮಾಹಿತಿಗಳು ಹಲವಾರು ರೀತಿಯಲ್ಲಿ ಉಪಯೋಗವಾಗುತ್ತಾ ಇವೆ.

## ಸಹಭಾಗಿ ಸಂಸ್ಥೆಗಳ ಸಭೆ



ದಿನಾಂಕ 17.01.2019ರಂದು ಸದರಿ ಸಭೆಯು ಕೊಪ್ಪಳ ಸಮೂಹ ಸಾಮರ್ಥ್ಯ ತರಬೇತಿ ಸಭಾಂಗಣದಲ್ಲಿ ನಡೆಯಿತು. ಕರ್ನಾಟಕ ಆರೋಗ್ಯ ಸಂವರ್ಧನಾ ಸಂಸ್ಥೆ, ಸೇವಾ ಸಂಸ್ಥೆ, ವೆಡ್ಸ್, ಸ್ವರಭಾರತಿ ಸಂಸ್ಥೆ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಸರ್ವೋದಯ ಸಮಗ್ರ ಗ್ರಾಮೀಣ ಅಭಿವೃದ್ಧಿ ಸಂಸ್ಥೆಗಳು ಭಾಗವಹಿಸಿದ್ದವು.



ವರದಿ : ಶರಣಪ್ಪ ಉಪ್ಪಾರ

ಮುಖಪುಟ ವಿನ್ಯಾಸ: ಸುನೈಫ್ ವಿಟ್ಲ    ಮುದ್ರಣ: ಪಿಕ್ಸೆಲ್ಸ್ ಡಿಸೈನರ್ಸ್, ಕುದ್ರೋಳಿ, ಮಂಗಳೂರು

DEEDS SAMVAADA - A news letter by DEEDS, Mangalore

ವಿಳಾಸ : ಡೆವಲಪ್‌ಮೆಂಟ್ ಎಜುಕೇಶನ್ ಸರ್ವಿಸ್ (ಡೀಡ್ಸ್), ಆನಂದ ಅಪಾರ್ಟ್‌ಮೆಂಟ್ಸ್, ಕದ್ರಿ, ಮಂಗಳೂರು, ದ.ಕ. 575002, ದೂರವಾಣಿ: 0824–2217022, 4281037

E-mail: deeds82@rediffmail.com, Website: www.deedsmangaluru.in